ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಜೆಎಂಎಫ್‌ಸಿ ನ್ಯಾಯಾಲಯ, ಕೆಜಿಎಫ್

ಸಿ.ಸಿ.ನಂ.3255/2024

ಚಾಸಾ:2 ಪ್ರಾಸಾ: 2

ದಿನಾಂಕಃ 25.03.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷಿದಾರರ ಹೆಸರು– ಬಸವರಾಜ್ ಕಾಮಳೆ

ತಂದೆಯ ಹೆಸರು– ಲಕ್ಷ್ಮಣ್

ವಯಸ್ಸು – 25 ವರ್ಷ

ಉದ್ಯೋಗ– ಪೇದೆ, ಆರ್ ಪೇಟೆ, ಪೋಲೀಸ್ ಠಾಣೆ

ವಾಸ– ಕೆಜಿಎಫ್

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

1. ನಾನು ಈಗ ಸುಮಾರು 4 ವರ್ಷಗಳಿಂದ ಇಂದಿನವರೆಗೂ ಆರ್ ಪೇಟೆ ಪೋಲೀಸ್ ಠಾಣೆಯಲ್ಲಿ ಪೇದೆಯಾಗಿ ಆಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

2. ದಿನಾಂಕ 30.07.2024 ರಂದು ಚಾಸಾ–13 ರವರು ನನ್ನನ್ನು ಮತ್ತು ಚಾಸಾ–1 ರವರನ್ನು ನಮ್ಮ ಠಾಣೆಯ ಕಳವು ಪ್ರಕರಣಗಳಲ್ಲಿ ಆರೋಪಿ ಮತ್ತು ಮಾಲಿನ ಪತ್ತೆ ಮಾಡಲು ನೇಮಕ ಮಾಡಿದ್ದು ಆ ಮೇರೆಗೆ ನಾವು ಅದೇ ದಿನ ಸಂಜೆ 5.00 ಗಂಟೆಗೆ ಕೆಜಿಎಫ್ ನಗರದ ಆರ್ ಪೇಟೆಯ ಸಂಜೆಯ ಗಾಂಧಿ ನಗರ ಮತ್ತು ಅಂಬೇಡ್ಕರ್ ನಗರದಲ್ಲಿ ಗಸ್ತು ಕರ್ತವ್ಯದಲ್ಲಿರುವಾಗ ಸಾಲ್ಡಾನ ಸರ್ಕಲ್ ದಿಂದ ಪೂಸ್ವಾಮಿ ಕಾಲೋನಿಗೆ ಹೋಗುವ ರಸ್ತೆಯಲ್ಲಿ ಒಬ್ಬ ಆಸಾಮಿ ತನ್ನ ಹತ್ತಿರ ಒಂದು ಲಾಂಗ್ ನ್ನು ಹಿಡಿದುಕೊಂಡು ರಸ್ತೆಯಲ್ಲಿ ಹೋಗು ಬರುವವರಿಗೆ ಬೆದರಿಕೆ ಹಾಕುತ್ತಿದ್ದಾನೆ ಎಂದು ನಮಗೆ ಬಾತ್ಮಿದಾರರಿಂದ ಬಾತ್ಮಿ ಬಂದ ಮೇರೆಗೆ ನಾನು ಮತ್ತು ಚಾಸಾ–1 ರವರು ಸದರಿ ಸ್ಥಳಕ್ಕೆ ಭೇಟಿ ನೀಡಿ ನೋಡಿದಾಗ ಒಬ್ಬ ವ್ಯಕ್ತಿಯು ತನ್ನ ಕೈಯಲ್ಲಿ ಒಂದು ಲಾಂಗ್ ನ್ನು ಹಿಡಿದುಕೊಂಡಿದ್ದು ಆಗ ನಾನು ಮತ್ತು ಚಾಸಾ–1 ರವರು ಸೇರಿ ಸದರಿ ವ್ಯಕ್ತಿಯನ್ನು ಹಿಡಿದು ವಿಚಾರಿಸಲಾಗಿ ಆತನು ತನ್ನ ಹೆಸರು ಸಚಿನ್ ಅಲಿಯಾಸ್ ಟಿಪಿಕ್ ಬಿನ್ ಕರ್ತೋರ್ವಿಯನ್, ವಾಸಃ ಇ.ಟಿ. ಬ್ಲಾಕ್, ಆರ್ ಪೇಟೆ, ಕೆಜಿಎಫ್ ಎಂದು ತಿಳಿಸಿದನು. ಸದರಿ ವ್ಯಕ್ತಿಯು ಈಗಾಗಲೇ ನಮ್ಮ ಠಾಣೆಯಲ್ಲಿ ರೌಡಿ ಶೀಟರ್ ಆಗಿರುತ್ತಾನೆ. ಅದೇ ರೀತಿ ಸದರಿ ವ್ಯಕ್ತಿಯನ್ನು ಪರಿಶೀಲಿಸಲಾಗಿ ಆತನ ಹತ್ತಿರ ಸುಮಾರು 2 ಅಡಿ ಉದ್ದ ಮತ್ತು 2 ಅಡಿ ಅಗಲದ ಒಂದು ಲಾಂಗ್ ಇತ್ತು. ನಂತರ ನಾವು ಸದರಿ ವ್ಯಕ್ತಿಯನ್ನು ಮತ್ತು ಲಾಂಗ್ ನ್ನು ನಮ್ಮ ವಶಕ್ಕೆ ಪಡೆದು ಸಂಜೆ 6.15 ಗಂಟೆಗೆ ಪೋಲೀಸ್ ಠಾಣೆಗೆ ತಂದು ಚಾಸಾ–13 ರವರ ಮುಂದೆ ಹಾಜರು ಪಡಿಸಿದ್ದು ಚಾಸಾ–1 ರವರು ಈ ಬಗ್ಗೆ ವರದಿ ಸಲ್ಲಿಸಿರುತ್ತಾರೆ. ಈ ಕುರಿತು ಚಾಸಾ–13 ರವರು ನನ್ನ ವಿಚಾರಣೆ ಮಾಡಿ ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ.

3. ಈಗ ನ್ಯಾಯಾಲಯದ ಮುಂದೆ ಇರುವ ಮು.ಮಾ.1 ಲಾಂಗ್ ನಾವು ಆ ದಿನ ಆರೋಪಿಯ ವಶದಿಂದ ಅಮಾನತ್ತುಪಡಿಸಿಕೊಂಡ ಲಾಂಗ್ ಆಗಿರುತ್ತದೆ.

4. ಅದೇ ರೀತಿ ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯು ಆ ದಿನ ಅಕ್ರಮವಾಗಿ ತನ್ನ ಹತ್ತಿರ ಲಾಂಗ್ ಹಿಡಿದುಕೊಂಡು ಸಾರ್ವಜನಿಕರಲ್ಲಿ ಭಯ ಉಂಟು ಮಾಡುತ್ತಿದ್ದ ವ್ಯಕ್ತಿಯಾಗಿರುತ್ತಾನೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ಸಿ.ಡಿ. ವಕೀಲರಿಂದಃ</u>**

5. ಚಾಸಾ-13 ರವರು ನನ್ನನ್ನು ಮತ್ತು ಚಾಸಾ-1 ರವರನ್ನು ನಮ್ಮ ಠಾಣೆಯ ಯಾವ ಮುಕ್ಕದ್ದಮೆಗಳಲ್ಲಿ ಆರೋಪಿ ಮತ್ತು ಮಾಲಿನ ಪತ್ತೆಗಾಗಿ ನೇಮಕ ಮಾಡಿದ್ದರು ಎಂದು ನನಗೆ ಈಗ ಹೇಳಲು ಬರುವುದಿಲ್ಲ. ಸದರಿ ಪ್ರಕರಣಗಳ ಸಂಖ್ಯೆಯನ್ನು ನಾನು ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ಚಾಸಾ-13 ರವರು ನಮಗೆ ನಮ್ಮ ಠಾಣೆಯ ಸರಹದ್ದಿನ ಎಲ್ಲಾ ಸ್ಥಳಗಳಲ್ಲಿ ಗಸ್ತು ಕರ್ತವ್ಯ ಮಾಡಲು ಹೇಳಿದ್ದರು. ನಾವು ಸ್ಥಳಕ್ಕೆ ಧಾವಿಸುವುದಕ್ಕೂ ಮುಂಚೆ ವಿಚಾರವನ್ನು ನಮ್ಮ ಮೇಲಾಧಿಕಾರಿಗಳಿಗೆ ತಿಳಿಸಿರುವುದಿಲ್ಲ. ಸಾಮಾನ್ಯವಾಗಿ ಪೂಸ್ವಾಮಿ ಕಾಲೋನಿಗೆ ಹೋಗುವ ರಸ್ತೆಯಲ್ಲಿ ಜನದಟ್ಟಣೆ ಇರುತ್ತದೆ ಎಂದರೆ ಸ್ವಲ್ಪ ಪ್ರಮಾಣದಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ನಾವು ಸ್ಥಳಕ್ಕೆ ಹೋಗುವುದಕ್ಕೂ ಮುಂಚೆ ನ್ಯಾಯಾಲಯದಿಂದ ಶೋಧನಾ ವಾರೆಂಟ್ ನ್ನು ಪಡೆದುಕೊಂಡಿಲ್ಲ. ಅದೇ ರೀತಿ ನಾವು ಆರೋಪಿಯನ್ನು ವಶಕ್ಕೆ ಪಡೆದುಕೊಂಡಾಗ ಸ್ಥಳದಲ್ಲಿ ಪಂಚನಾಮೆ ಜರುಗಿಸಿರುವುದಿಲ್ಲ. ನಾನು ಮು.ಮಾ.1 ನ್ನು ಅಳೆದು ನೋಡಿರುವುದಿಲ್ಲ ಆದರೆ ಅಂದಾಜಿನಲ್ಲಿ ಅದರ ಅಳತೆಯನ್ನು ಹೇಳಿರುತ್ತೇನೆ. ಮು.ಮಾ.1 ರ ಮೇಲೆ ಪಂಚರು ಸಹಿ ಮಾಡಿರುವ ಚೀಟಿ ಇರುವುದಿಲ್ಲ ಎಂದರೆ ಸರಿ.

6. ನಾನು ದಿನಚರಿ ಪುಸ್ತಕವನ್ನು ಇಟ್ಟಿರುತ್ತೇನೆ. ಈ ಪ್ರಕರಣದ ಬಗ್ಗೆ ನಾನು ನನ್ನ ದಿನಚರಿ ಪುಸ್ತಕದಲ್ಲಿ ನಮೂದಿಸಿರುತ್ತೇನೆ. ನಾನು ಹೇಳಿದಂತೆ ನಾನು ಯಾವತ್ತೂ ಸಾಲ್ಡಾನಾ ಸರ್ಕಲ್ ದಿಂದ ಪೂಸ್ವಾಮಿ ಕಾಲೋನಿ ಕಡೆಗೆ ಹೋಗುವ ರಸ್ತೆಗೆ ಹೋಗಿರುವುದಿಲ್ಲ, ಆ ಸ್ಥಳದಲ್ಲಿ ಆರೋಪಿಯು ಯಾವತ್ತೂ ಅಕ್ರಮವಾಗಿ ತನ್ನ ಹತ್ತಿರ ಲಾಂಗ್ ನ್ನು ಇಟ್ಟಿರಲಿಲ್ಲ, ನಾನು ಆತನನ್ನು ಹಿಡಿದಿರುವುಲ್ಲ, ಆತನಿಂದ ಮು.ಮಾ.1 ನ್ನು ವಶಪಡಿಸಿಕೊಂಡಿರುವುದಿಲ್ಲ ಮತ್ತು ನಾನು ಚಾಸಾ-13 ರವರಿಗೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಮು.ಮಾ.1 ಕ್ಕೂ ಮತ್ತು ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಮತ್ತು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:** ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಮುಜಫರ್)
ಹಿರಿಯ ಸಿ.ಜೆ. ಮತ್ತು ಪ್ರಧಾನ ಜೆಎಂಎಫ್‌ಸಿ
ಕೆಜಿಎಫ್

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಜೆಎಂಎಫ್‌ಸಿ ನ್ಯಾಯಾಲಯ, ಕೆಜಿಎಫ್

ಸಿ.ಸಿ.ನಂ.3255/2024

ಚಾಸಾ: 1 ಪ್ರಾಸಾ: 1

ದಿನಾಂಕಃ 25.03.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷಿದಾರರ ಹೆಸರು– ಮಂಜುನಾಥ ರೆಡ್ಡಿ

ತಂದೆಯ ಹೆಸರು– ವೆಂಕಟಮುನಿರೆಡ್ಡಿ

ವಯಸ್ಸು – 43 ವರ್ಷ

ಉದ್ಯೋಗ– ಮುಖ್ಯ ಪೇದೆ, ಆರ್ ಪೇಟೆ, ಪೋಲೀಸ್ ಠಾಣೆ

ವಾಸ– ಬಂಗಾರಪೇಟೆ

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

1. ನಾನು ದಿನಾಂಕ 27.06.2023 ರಿಂದ ಇಂದಿನವರೆಗೂ ಆರ್ ಪೇಟೆ ಪೋಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಆಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

2. ದಿನಾಂಕ 30.07.2024 ರಂದು ಚಾಸಾ–13 ರವರು ನನ್ನನ್ನು ಮತ್ತು ಚಾಸಾ–2 ರವರನ್ನು ನಮ್ಮ ಠಾಣೆಯ ಕಳವು ಪ್ರಕರಣಗಳಲ್ಲಿ ಆರೋಪಿ ಮತ್ತು ಮಾಲಿನ ಪತ್ತೆ ಮಾಡಲು ನೇಮಕ ಮಾಡಿದ್ದು ಆ ಮೇರೆಗೆ ನಾವು ಅದೇ ದಿನ ಸಂಜೆ 5.00 ಗಂಟೆಗೆ ಕೆಜಿಎಫ್ ನಗರದ ಆರ್ ಪೇಟೆಯ ಸಂಜೆಯ ಗಾಂಧಿ ನಗರ ಮತ್ತು ಅಂಬೇಡ್ಕರ್ ನಗರದಲ್ಲಿ ಗಸ್ತು ಕರ್ತವ್ಯದಲ್ಲಿರುವಾಗ ಸಾಲ್ಡಾನ ಸರ್ಕಲ್ ದಿಂದ ಪೂಸ್ವಾಮಿ ಕಾಲೋನಿಗೆ ಹೋಗುವ ರಸ್ತೆಯಲ್ಲಿ ಒಬ್ಬ ಆಸಾಮಿ ತನ್ನ ಹತ್ತಿರ ಒಂದು ಲಾಂಗ್ ನ್ನು ಹಿಡಿದುಕೊಂಡು ರಸ್ತೆಯಲ್ಲಿ ಹೋಗು ಬರುವವರಿಗೆ ಬೆದರಿಕೆ ಹಾಕುತ್ತಿದ್ದಾನೆ ಎಂದು ನಮಗೆ ಬಾತ್ಮಿದಾರರಿಂದ ಬಾತ್ಮಿ ಬಂದ ಮೇರೆಗೆ ನಾನು ಮತ್ತು ಚಾಸಾ–2 ರವರು ಸದರಿ ಸ್ಥಳಕ್ಕೆ ಭೇಟಿ ನೀಡಿ ನೋಡಿದಾಗ ಒಬ್ಬ ವ್ಯಕ್ತಿಯು ತನ್ನ ಕೈಯಲ್ಲಿ ಒಂದು ಲಾಂಗ್ ನ್ನು ಹಿಡಿದುಕೊಂಡಿದ್ದು ಆಗ ನಾನು ಮತ್ತು ಚಾಸಾ–2 ರವರು ಸೇರಿ ಸದರಿ ವ್ಯಕ್ತಿಯನ್ನು ಹಿಡಿದು ವಿಚಾರಿಸಲಾಗಿ ಆತನು ತನ್ನ ಹೆಸರು ಸಚಿನ್ ಅಲಿಯಾಸ್ ಟಿಪಿಕ್ ಬಿನ್ ಕರ್ತೋರ್ವಿಯನ್, ವಾಸಃ ಇ.ಟಿ. ಬ್ಲಾಕ್, ಆರ್ ಪೇಟೆ, ಕೆಜಿಎಫ್ ಎಂದು ತಿಳಿಸಿದನು. ಸದರಿ ವ್ಯಕ್ತಿಯು ಈಗಾಗಲೇ ನಮ್ಮ ಠಾಣೆಯಲ್ಲಿ ರೌಡಿ ಶೀಟರ್ ಆಗಿರುತ್ತಾನೆ. ಅದೇ ರೀತಿ ಸದರಿ ವ್ಯಕ್ತಿಯನ್ನು ಪರಿಶೀಲಿಸಲಾಗಿ ಆತನ ಹತ್ತಿರ ಸುಮಾರು 2 ಅಡಿ ಉದ್ದ ಮತ್ತು 2 ಅಡಿ ಅಗಲದ ಒಂದು ಲಾಂಗ್ ಇತ್ತು. ನಂತರ ನಾವು ಸದರಿ ವ್ಯಕ್ತಿಯನ್ನು ಮತ್ತು ಲಾಂಗ್ ನ್ನು ನಮ್ಮ ವಶಕ್ಕೆ ಪಡೆದು ಸಂಜೆ 6.15 ಗಂಟೆಗೆ ಪೋಲೀಸ್ ಠಾಣೆಗೆ ತಂದು ಚಾಸಾ–13 ರವರ ಮುಂದೆ ಹಾಜರು ಪಡಿಸಿ ನಾನು ವರದಿ ಸಲ್ಲಿಸಿರುತ್ತೇನೆ.

3. ನಂತರ ದಿನಾಂಕ 31.07.2024 ರಂದು ಚಾಸಾ–13 ರವರು ನನ್ನ ಸಮಕ್ಷಮ ಮತ್ತು ಪಂಚರಾದ ಚಾಸಾ–5 ಮತ್ತು 6 ರವರ ಸಮಕ್ಷಮ ಮಧ್ಯಾಹ್ನ 1.00 ರಿಂದ 2.00

ಗಂಟೆವರೆಗೆ ನಮ್ಮ ಠಾಣೆಯಲ್ಲಿ ಒಂದು ಅಮಾನತ್ತು ಪಂಚನಾಮೆಯನ್ನು ಜರುಗಿಸಿ ಮೇಲೆ ಉಲ್ಲೇಖಿಸಿದ ಲಾಂಗ್ ನ್ನು ಆರೋಪಿಯ ವಶದಿಂದ ಅಮಾನತ್ತು ಪಡಿಸಿಕೊಂಡಿರುತ್ತಾರೆ. ಆ ಸಮಯದಲ್ಲಿ ಚಾಸಾ–13 ರವರು ಜರುಗಿಸಿದ ಮಹಜರ್ ಕ್ರಮದ ವಿಡಿಯೋ ಮಾಡಲಾಗಿರುತ್ತದೆ.

4. ನಂತರ ಅದೇ ದಿನ ಚಾಸಾ–13 ರವರು ನನ್ನನ್ನು, ಆರೋಪಿಯನ್ನು ಮತ್ತು ಪಂಚರಾದ ಚಾಸಾ–7 ಮತ್ತು 8 ರವರನ್ನು ಬರಮಾಡಿಕೊಂಡು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ಕೊಡು ನಮ್ಮ ಸಮಕ್ಷಮ ಮಧ್ಯಾಹ್ನ 2.30 ರಿಂದ 3.15 ಗಂಟೆವರೆಗೆ ಸದರಿ ಸ್ಥಳವನ್ನು ಪರಿಶೀಲಿಸಿ ಸ್ಥಳ ಪಂಚನಾಮೆ ಮಾಡಿರುತ್ತಾರೆ. ಆ ಸಮಯದಲ್ಲಿ ಚಾಸಾ–13 ರವರು ಜರುಗಿಸಿದ ಮಹಜರ್ ಕ್ರಮದ ವಿಡಿಯೋ ಮಾಡಲಾಗಿರುತ್ತದೆ.

5. ಈಗ ನನಗೆ ತೋರಿಸಿದ ದಾಖಲೆಯು ನಾನು ಚಾಸಾ–13 ರವರಿಗೆ ನೀಡಿದ ನನ್ನ ವರದಿಯಾಗಿದ್ದು ಅದನ್ನು ಈಗ ನಿಪಿ–1 ಹಾಗೂ ಅದರ ಮೇಲೆ ಇರುವ ನನ್ನ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು.

6. ಈಗ ನನಗೆ ತೋರಿಸಿದ ದಾಖಲೆಯು ಚಾಸಾ–13 ರವರು ಜರುಗಿಸಿದ ಅಮಾನತ್ತು ಪಂಚನಾಮೆಯಾಗಿದ್ದು ಅದನ್ನು ಈಗ ನಿಪಿ–2 ಹಾಗೂ ಅದರ ಮೇಲೆ ಇರುವ ನನ್ನ ಸಹಿಯನ್ನು ನಿಪಿ–2(ಎ) ಎಂದು ಗುರುತಿಸಲಾಯಿತು.

7. ಈಗ ನನಗೆ ತೋರಿಸಿದ ದಾಖಲೆಯು ಚಾಸಾ–13 ರವರು ಜರುಗಿಸಿದ ಸ್ಥಳ ಪಂಚನಾಮೆಯಾಗಿದ್ದು ಅದನ್ನು ಈಗ ನಿಪಿ–3 ಹಾಗೂ ಅದರ ಮೇಲೆ ಇರುವ ನನ್ನ ಸಹಿಯನ್ನು ನಿಪಿ–3(ಎ) ಎಂದು ಗುರುತಿಸಲಾಯಿತು.

8. ಈಗ ನನಗೆ ತೋರಿಸಿದ ಸಿಡಿಗಳು ಚಾಸಾ–13 ರವರು ಜರುಗಿಸಿದ ಅಮಾನತ್ತು ಪಂಚನಾಮೆ ಮತ್ತು ಸ್ಥಳ ಪಂಚನಾಮೆಗಳ ಸಿಡಿಗಳಾಗಿದ್ದು ಅವುಗಳನ್ನು ಈಗ ಕ್ರಮವಾಗಿ ನಿಪಿ–4 ಮತ್ತು 5 ಎಂದು ಗುರುತಿಸಲಾಯಿತು.

9. ಈಗ ನ್ಯಾಯಾಲಯದ ಮುಂದೆ ಇರುವ ಲಾಂಗ್ ನಾವು ಆ ದಿನ ಆರೋಪಿಯ ವಶದಿಂದ ಅಮಾನತ್ತುಪಡಿಸಿಕೊಂಡ ಲಾಂಗ್ ಆಗಿದ್ದು ಅದನ್ನು ಈಗ ಮು.ಮಾ.1 ಎಂದು ಗುರುತಿಸಲಾಯಿತು.

10. ಅದೇ ರೀತಿ ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯು ಆ ದಿನ ಅಕ್ರಮವಾಗಿ ತನ್ನ ಹತ್ತಿರ ಲಾಂಗ್ ಹಿಡಿದುಕೊಂಡು ಸಾರ್ವಜನಿಕರಲ್ಲಿ ಭಯ ಉಂಟು ಮಾಡುತ್ತಿದ್ದ ವ್ಯಕ್ತಿಯಾಗಿರುತ್ತಾನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ಸಿ.ಡಿ. ವಕೀಲರಿಂದಃ**

11. ಚಾಸಾ-13 ರವರು ನನ್ನನ್ನು ಮತ್ತು ಚಾಸಾ-2 ರವರನ್ನು ನಮ್ಮ ಠಾಣೆಯ ಯಾವ ಮುಕ್ಕದ್ದಮೆಗಳಲ್ಲಿ ಆರೋಪಿ ಮತ್ತು ಮಾಲಿನ ಪತ್ತೆಗಾಗಿ ನೇಮಕ ಮಾಡಿದ್ದರು ಎಂದು ನನಗೆ ಈಗ ಹೇಳಲು ಬರುವುದಿಲ್ಲ. ಸದರಿ ಪ್ರಕರಣಗಳ ಸಂಖ್ಯೆಯನ್ನು ನಾನು ನಿಪಿ-1 ರಲ್ಲಿ ಬರೆದಿರುವುದಿಲ್ಲ ಎಂದರೆ ಸರಿ. ಚಾಸಾ-13 ರವರು ನಮಗೆ ನಮ್ಮ ಠಾಣೆಯ ಸರಹದ್ದಿನ ಎಲ್ಲಾ ಸ್ಥಳಗಳಲ್ಲಿ ಗಸ್ತು ಕರ್ತವ್ಯ ಮಾಡಲು ಹೇಳಿದ್ದರು. ನಾವು ಸ್ಥಳಕ್ಕೆ ಧಾವಿಸುವುದಕ್ಕೂ ಮುಂಚೆ ವಿಚಾರವನ್ನು ನಮ್ಮ ಮೇಲಾಧಿಕಾರಿಗಳಿಗೆ ತಿಳಿಸಿರುವುದಿಲ್ಲ. ಸಾಮಾನ್ಯವಾಗಿ ಪೂಸ್ವಾಮಿ ಕಾಲೋನಿಗೆ ಹೋಗುವ ರಸ್ತೆಯಲ್ಲಿ ಜನದಟ್ಟಣೆ ಇರುತ್ತದೆ ಎಂದರೆ ಸ್ವಲ್ಪ ಪ್ರಮಾಣದಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ನಾವು ಸ್ಥಳಕ್ಕೆ ಹೋಗುವುದಕ್ಕೂ ಮುಂಚೆ ನ್ಯಾಯಾಲಯದಿಂದ ಶೋಧನಾ ವಾರೆಂಟ್ ನ್ನು ಪಡೆದುಕೊಂಡಿಲ್ಲ. ಅದೇ ರೀತಿ ನಾವು ಆರೋಪಿಯನ್ನು ವಶಕ್ಕೆ ಪಡೆದುಕೊಂಡಾಗ ಸ್ಥಳದಲ್ಲಿ ಪಂಚನಾಮೆ ಜರುಗಿಸಿರುವುದಿಲ್ಲ. ನಾನು ಮು.ಮಾ.1 ನ್ನು ಅಳೆದು ನೋಡಿರುವುದಿಲ್ಲ ಆದರೆ ಅಂದಾಜಿನಲ್ಲಿ ಅದರ ಅಳತೆಯನ್ನು ಹೇಳಿರುತ್ತೇನೆ. ಮು.ಮಾ.1 ರ ಮೇಲೆ ಪಂಚರು ಸಹಿ ಮಾಡಿರುವ ಚೀಟಿ ಇರುವುದಿಲ್ಲ ಎಂದರೆ ಸರಿ.

12. ನಾನು ದಿನಚರಿ ಪುಸ್ತಕವನ್ನು ಇಟ್ಟಿರುತ್ತೇನೆ. ಈ ಪ್ರಕರಣದ ಬಗ್ಗೆ ನಾನು ನನ್ನ ದಿನಚರಿ ಪುಸ್ತಕದಲ್ಲಿ ನಮೂದಿಸಿರುತ್ತೇನೆ. ನಾನು ಹೇಳಿದಂತೆ ನಾನು ಯಾವತ್ತೂ ಸಾಲ್ಡಾನಾ ಸರ್ಕಲ್ ದಿಂದ ಪೂಸ್ವಾಮಿ ಕಾಲೋನಿ ಕಡೆಗೆ ಹೋಗುವ ರಸ್ತೆಗೆ ಹೋಗಿರುವುದಿಲ್ಲ, ಆ ಸ್ಥಳದಲ್ಲಿ ಆರೋಪಿಯು ಯಾವತ್ತೂ ಅಕ್ರಮವಾಗಿ ತನ್ನ ಹತ್ತಿರ ಲಾಂಗ್ ನ್ನು ಇಟ್ಟಿರಲಿಲ್ಲ, ನಾನು ಆತನನ್ನು ಹಿಡಿದಿರುವುಲ್ಲ, ಆತನಿಂದ ಮು.ಮಾ.1 ನ್ನು ವಶಪಡಿಸಿಕೊಂಡಿರುವುದಿಲ್ಲ ಮತ್ತು ನಾನು ಚಾಸಾ-13 ರವರಿಗೆ ಸುಳ್ಳು ವರದಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಮು.ಮಾ.1 ಕ್ಕೂ ಮತ್ತು ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಮತ್ತು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಮುಜಫರ್)

ಹಿರಿಯ ಸಿ.ಜೆ. ಮತ್ತು ಪ್ರಧಾನ ಜೆಎಂಎಫ್‌ಸಿ

ಕೆಜಿಎಫ್